# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಪಿ.ಸಿ. ನಂ. 221/19

ಸಿ.ಡಬ್ಲ್ಯು 2

| | | |
|---|---|---|
| ಸಾಕ್ಷಿದಾರರ ಹೆಸರು | – | ಸಂಧ್ಯಾ ಪಟಗಾರ |
| ತಂದೆಯ ಹೆಸರು | – | ಬುದವಂತ ಪಟಗಾರ |
| ವಯಸ್ಸು | – | 26 ವರ್ಷ |
| ಉದ್ಯೋಗ | – | ಕ್ಲರ್ಕ, ಗ್ರಾಮೀಣ ಸೇವಾ ಸಹಕಾರಿ ಸಂಘ |
| ವಾಸ್ತವ್ಯ | – | ಬರ್ಗಿ, ತಾಲೂಕ ಕುಮಟಾ |

(ಇಂದು ದಿನಾಂಕ 21–09–2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಸಾಕ್ಷಿಯ ಸ್ವ ಪ್ರತಿಜ್ಞಾ ಹೇಳಿಕೆ**

**1.** ನಾನು ಕಳೆದ 8 ವರ್ಷಗಳಿಂದ ಗ್ರಾಮೀಣ ಸೇವಾ ಸಹಕಾರಿ ಸಂಘ ಬರಗದ್ದೆಯಲ್ಲಿ ಕ್ಲರ್ಕ ಎಂದು ಕೆಲಸ ಮಾಡುತ್ತಿದ್ದೇನೆ. ನನ್ನ ನೇಮಕಕ್ಕೆ ಸಂಬಂಧಪಟ್ಟ ಠರಾವಿನ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಯನ್ನು ಈಗ ನಿ.ಪಿ. 15 ಎಂದು ಗುರುತಿಸಲಾಯಿತು. ಫಿರ್ಯಾದಿದಾರರು ನಮ್ಮ ಸಂಘದಲ್ಲಿ ಕಾರ್ಯದರ್ಶಿ ಇರುತ್ತಾರೆ.

**2.** ದಿನಾಂಕ 08–08–2019 ರಂದು ನಮ್ಮ ಸಂಘದ ಕಚೇರಿಯಲ್ಲಿ ಫಿರ್ಯಾದುದಾರರು ನಮ್ಮ ಸಂಘದ ಸಿಬ್ಬಂದಿ ಗಣಪತಿ ದೇವು ಗೌಡ ಮತ್ತು ನಾನು ಕೆಲಸ ಮಾಡುತ್ತಾ ಇದ್ದಾಗ ಸಾಯಂಕಾಲ 5–30 ಗಂಟೆಗೆ ಅಂದಾಜು 15 - 20 ಜನ ಗುಂಪು ಕಟ್ಟಿಕೊಂಡು ಬಂದು ಏಕಾಏಕಿ ಫಿರ್ಯಾದುದಾರರ ಕ್ಯಾಬಿನಿಗೆ ಹೋಗಿ ಗಲಾಟೆ ಮಾಡಿರುತ್ತಾರೆ . ಸದ್ರಿ ಜನರ ಗುಂಪು ಫಿರ್ಯಾದುದಾರರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆ . ನಾನು ಮತ್ತು ಗಣಪತಿ ದೇವು ಗೌಡ ಸದ್ರಿ ಗುಂಪಿನಲ್ಲಿದ್ದ ಜನರಿಗೆ ಬೈದಾಡಬೇಡಿ ಎಂದು ತಿಳುವಳಿಕೆ ಹೇಳಿದೆವು .. ಆಗ ಸದ್ರಿ ಗುಂಪಿನಲ್ಲಿದ್ದ ಜನ ಫಿರ್ಯಾದುದಾರರ ಟೇಬಲನ ಮೇಲೆ ಇದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದರು. ಸದ್ರಿ ಗುಂಪಿನಲ್ಲಿದ್ದ ಆರೋಪಿ ನಂ.1 ರಿಂದ 11 ರವರು ನಮ್ಮ ಸಂಘದ ಸದಸ್ಯರು ಇರುತ್ತಾರೆ. ಅವರುಗಳು ತಮ್ಮ ಮುದ್ದತ್ತು ಭದ್ರತಾ ಠೇವಣಿ (Fixed deposit) ಪ್ರಮಾಣಪತ್ರದ ಮೂಲ ಪ್ರತಿಯನ್ನು ಫಿರ್ಯಾದುದಾರರಿಗೆ ನೀಡಿ ಅವರಿಂದ 11 ಖಾಲಿ ಚಕಗಳಿಗೆ ಸಹಿ ಪಡೆದುಕೊಂಡಿರುತ್ತಾರೆ. ಚಕ ಕೊಡದಿದ್ದರೆ ಮತ್ತು ಅದಕ್ಕೆ ಸಹಿ ಮಾಡದಿದ್ದರೆ ಸುಮ್ಮನೆ ಬಿಡುವುದಿಲ್ಲ ಎಂದು ಫಿರ್ಯಾದುದಾರರಿಗೆ ಹೇಳಿ ಬಲವಂತದಿಂದ

ಅವರ ಸಹಿಯನ್ನು ಪಡೆದು ಚಕನ್ನು ಕಸಿದುಕೊಂಡಿರುತ್ತಾರೆ. ಫಿರ್ಯಾದುದಾರರ ಟೇಬಲ್‌ನ ಮೇಲೆ ಇದ್ದ ನಮ್ಮ ಸಂಘದ ಲ್ಯಾಪಟಾಪನ್ನು ಯಾರೋ ತೆಗೆದುಕೊಂಡು ಹೋಗಿರುತ್ತಾರೆ. ಸದ್ರಿ ಘಟನೆ ನಡೆದ ದಿನ ಫಿರ್ಯಾದುದಾರರು ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದರು. ಆದರೆ ಪೊಲೀಸರು ದೂರು ಸ್ವೀಕರಿಸಲು ವಿಳಂಬ ಮಾಡಿರುತ್ತಾರೆ.

4. ಮರುದಿನ ವಿಸ್ಮಯ ಮತ್ತು ಸಿಂಚನ ಟಿವಿಯಲ್ಲಿ ಎಲ್ಲಾ ಆರೋಪಿತರು ಫಿರ್ಯಾದುದಾರರ ಮೇಲೆ ದುಡ್ಡು ತಿಂದಿರುತ್ತಾರೆ ಎಂದು ಆರೋಪ ಮಾಡಿ ಜಾಹಿರಾತು ನೀಡಿರುತ್ತಾರೆ . ಅದೇ ರೀತಿ ಈ ಬಗ್ಗೆ ಕನ್ನಡ ಜನಾಂತರಂಗ ದಿನಪತ್ರಿಕೆಯಲ್ಲಿ ಕೂಡ ಪತ್ರಿಕಾ ಪ್ರಕಟಣೆ ಬಂದಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು , ಕುಮಟಾ